<u>ಅಸಲು ದಾವಾ ಸಂಖ್ಯೆ: **181/2023**</u> ಡಿ.ಡಬ್ಲ್ಯೂ:**-2**

ದಿನಾಂಕ: **15-12-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು:- ವಾದಿ ಪರ ವಕೀಲರಿಂದ:-</u>

ನಾನು ಪಿ ಯುಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. 3 ರಿಂದ 7 ನೇ ಪ್ರತಿವಾದಿಗಳು ನನ್ನ ತಂದೆಯ ಅಣ್ಣನ ಮಕ್ಕಳು. ಪ್ರತಿವಾದಿ 3 ರಿಂದ 6 ರವರಿಗೆ ಸೇರಿದ ಜಮೀನಿನ ದಕ್ಷಿಣ ದಿಕ್ಕಿಗೆ ನನಗೆ ಸೇರಿದ ಜಮೀನು ಇರುತ್ತದೆ. ನನಗೆ ಸೇರಿದ ಜಮೀನಿನ ಸರ್ವೇ ನಂ.44 ರಲ್ಲಿ 38 ಗುಂಟೆ ಜಮೀನು ಇರುತ್ತದೆ. ಪ್ರತಿವಾದಿ 3 ರಿಂದ 6 ರವರ ಜಮೀನಿನ ದಕ್ಷಿಣ ದಿಕ್ಕಿಗೆ ನನಗೆ ಸೇರಿದ ಸರ್ವೇ ನಂ.44 ಇರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ವಾದಿ ಸಲ್ಲಿಸಿರುವ ವಾದ ಪತ್ರದ ಬಗ್ಗೆ ಮತ್ತು ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತು. ನನಗೆ ಈ ದಾವೆಯ ಬಗ್ಗೆ 5 ನೇ ಪ್ರತಿವಾದಿ ತಿಳಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಸರ್ವೇ ಮಾಡಲು ಸರ್ವೇ ಅಧಿಕಾರಿಗಳು ಬಂದ ಸಮಯದಲ್ಲಿ ನಾನು ಹಾಜರಿದ್ದೇ ಆದರೆ ನಿರ್ದಿಷ್ಟವಾದ ದಿನಾಂಕ ನನಗೆ ನೆನಪಿಲ್ಲ. ಸರ್ವೇ ನಂ.1/2 ಮತ್ತು ಸರ್ವೇ ನಂ.1/4 ರ ಜಮೀನನ್ನು ಅಳತೆ ಮಾಡುವ ಸಮಯದಲ್ಲಿ ನಾನು ಹಾಜರಿದ್ದೆನು. ಸರ್ವೇ ನಂ.1/2 ಮತ್ತು ಸರ್ವೇ ನಂ.1/4 ಜಮೀನುಗಳನ್ನು ಸರ್ವೇ ಮಾಡಲು ಮುನೀರ್ ಸರ್ವೇ ಅಧಿಕಾರಿಯವರು ಬಂದಿದ್ದರು. ಸರ್ವೇ ನಂ.1/2 ರಲ್ಲಿ ಎಷ್ಟು ವಿಸ್ತೀರ್ಣ ಮತ್ತು ಸದರಿ ಜಮೀನು ಯಾರ ಹೆಸರಿನಲ್ಲಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು 1 ಎಕರೆ 36 ಗುಂಟೆ ಜಮೀನು ಇದ್ದು ರುದ್ರಮ್ಮ ಮತ್ತು ಪರಮೇಶ್ವರಪ್ಪರವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ಸರ್ವೇ ನಂ.1/2 ರ ಆಸ್ತಿಯನ್ನು ಸರ್ವೇ ಮಾಡುವ ಸಮಯದಲ್ಲಿ ನನ್ನ ತಂದೆಗೆ ನೋಟೀಸನ್ನು ಸರ್ವೇ ಅಧಿಕಾರಿಗಳು ಕೊಟ್ಟಿದ್ದರು. ಸರ್ವೇ ನಂ.1/2 ಅನ್ನು ಅಳತೆ ಮಾಡಿದ ಸಮಯದಲ್ಲಿ ಯಾರು ಎಷ್ಟು ವಿಸ್ತೀರ್ಣವನ್ನು ಒತ್ತುವರಿ ಮಾಡಿದ್ದಾರೆ ಎಂಬ ಬಗ್ಗೆ ಸರ್ವೇ ಅಧಿಕಾರಿಯವರು ನಿಮಗೆ ತೋರಿಸಿದ್ದರಾ ಎಂಬ ಪ್ರಶ್ನೆಗೆ ಸಾಕ್ಷಿಯು ತೋರಿಸಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ.1/2 ರ ಆಸ್ತಿಯನ್ನು ಸರ್ವೇ ಮಾಡುವ ಸಮಯದಲ್ಲಿ ಮಹಜರ್ ಗೆ ಸಹಿಯನ್ನು ಮಾಡಿರುತ್ತೇನೆ.

ಸರ್ವೇ ನಂ.1/2 ರ ಆಸ್ತಿಯನ್ನು ಸರ್ವೇ ಮಾಡುವ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ಮತ್ತು ಮಹಜರ್ ಗೆ ನಾನು ಸಹಿಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.1/4 ರ ಆಸ್ತಿಯು 4 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಸರ್ವೇ ಅಧಿಕಾರಿಗಳು ಸರ್ವೇ ನಂ.1/2 ಮತ್ತು ಸರ್ವೇ ನಂ.1/4 ರ ಆಸ್ತಿಯನ್ನು ಒಟ್ಟಿಗೆ ಸರ್ವೇ ಮಾಡಿದ್ದರು. ಸರ್ವೇ ಅಧಿಕಾರಿಗಳು ಸರ್ವೇ ನಂ.1/4 ರ ಆಸ್ತಿಯನ್ನು ಸರ್ವೇ ಮಾಡದಿದ್ದರೂ ಸಹ ಸರ್ವೇ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವ ಸರ್ವೇ ನಂಬರ್ ಗೆ ಸಂಬಂಧಿಸಿದಂತೆ ಹದ್ದುಬಸ್ತು ಮಾಡಲು ಅರ್ಜಿಯನ್ನು ಸಲ್ಲಿಸಿರುತ್ತಾರೋ ಅಂತಹ ಜಮೀನನ್ನು ಮಾತ್ರ ಸರ್ವೇ ಮಾಡುತ್ತಾರೆ ಎಂದರೆ ಸರಿ. ಸರ್ವೇ ನಂ.1/2 ಮತ್ತು ಸರ್ವೇ ನಂ.1/4 ರ ಜಮೀನುಗಳನ್ನು ಹದ್ದುಬಸ್ತು ಮಾಡಲು ಅರ್ಜಿಯನ್ನು ಸಲ್ಲಿಸಿದಾಗ ಸರ್ವೇ ಅಧಿಕಾರಿಗಳು ಸರ್ವೇ ಮಾಡಿದ ನಂತರ ಬಾಜುದಾರರು ಒತ್ತುವರಿ ಮಾಡಿದ್ದರೆ ಮಾತ್ರ ಒತ್ತುವರಿ ಮಾಡಿದ್ದಾರೆ ಎಂದು ಮಾತ್ರ ನಕಾಶೆಯಲ್ಲಿ ತೋರಿಸಿರುತ್ತಾರೆ ಎಂದರೆ ಸರಿ. ವಾದಿಗೆ ಸೇರಿದ ಜಮೀನು ಸರ್ವೇ ನಂ.1/3 ರಲ್ಲಿ 4 ಎಕರೆ 36 ಗುಂಟೆ ಜಮೀನು ಇರುತ್ತದೆ. ವಾದಿಗೆ ಸೇರಿದ ಆಸ್ತಿಯನ್ನು ಹದ್ದುಬಸ್ತು ಮಾಡುವ ಸಮಯದಲ್ಲಿ ನಾನು ಹಾಜರಿರಲಿಲ್ಲ. ಸರ್ವೇ ನಂ.1/3 ರಲ್ಲಿ ಎಷ್ಟು ಎಕರೆ ಒತ್ತುವರಿ ಆಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿ 3 ರಿಂದ 7 ರವರು ನನ್ನ ದೊಡ್ಡಪ್ಪನ ಮಕ್ಕಳಾದ್ದರಿಂದ ಅವರ ಮಾತುಕೇಳಿಕೊಂಡು ಬಂದು ನ್ಯಾಯಾಲಯದಲ್ಲಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾರು ಎಷ್ಟು ಒತ್ತುವರಿ ಮಾಡಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ಪ್ರತಿವಾದಿ 3 ರಿಂದ 7 ರವರ ಮಾತುಕೇಳಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.